ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	:	**ಶ್ರೀ ಬಿ. ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**
ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1987**
ಉತ್ತರಿಸಬೇಕಾದ ದಿನಾಂಕ	:	**16.03.2022**
ಉತ್ತರಿಸಬೇಕಾದ ಸಚಿವರು	:	**ಮಾನ್ಯ ಪಶುಸಂಗೋಪನೆ ಸಚಿವರು.**

ಕ್ರಸಂ	ಪ್ರಶ್ನೆ	ಉತ್ತರ
ಅ	ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಗೋ ಹತ್ಯೆ ನಿಯಂತ್ರಣ ಕಾಯ್ದೆ ಜಾರಿಗೆ ಬಂದ ನಂತರ, ಕಾಯ್ದೆ ಪ್ರಕಾರ ಎಷ್ಟು ಸರ್ಕಾರಿ ಗೋ ಶಾಲೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು)	ಗೋ ಹತ್ಯೆ ನಿಯಂತ್ರಣ ಕಾಯ್ದೆ ಜಾರಿಗೆ ಬಂದ ನಂತರ 2021–22 ನೇ ಸಾಲಿನಲ್ಲಿ ಜಿಲ್ಲೆಗೊಂದು ಗೋಶಾಲೆಯನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದೆ. 1. ಕಲಬುರ್ಗಿ ತಾಲ್ಲೂಕು ಮಿಣಜಿಗಿ ಗ್ರಾಮ ಸ.ನಂ.23 ರಲ್ಲಿ 25.00 ಎಕರೆ ಜಮೀನು ಗೋಶಾಲೆ ನಿರ್ಮಿಸಲು ಹಂಚಿಕೆಯಾಗಿದ್ದು, ಈ ಸ್ಥಳದಲ್ಲಿ ಗೋಶಾಲೆ ಪ್ರಾರಂಭಿಸಲು ಜಿಲ್ಲಾ ಪ್ರಾಣಿ ದಯಾ ಸಂಘಕ್ಕೆ ಒಟ್ಟು ₹47.50 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. 2. ಯಾದಗಿರಿ ತಾಲ್ಲೂಕು ರಾಚನ ಹಳ್ಳಿಗ್ರಾಮ ಸ.ನಂ.85 ರಲ್ಲಿ 25.00 ಎಕರೆ ಜಮೀನು ಗೋಶಾಲೆ ನಿರ್ಮಿಸಲು ಹಂಚಿಕೆಯಾಗಿದ್ದು, ಈ ಸ್ಥಳದಲ್ಲಿ ಗೋಶಾಲೆ ಪ್ರಾರಂಭಿಸಲು ಜಿಲ್ಲಾ ಪ್ರಾಣಿ ದಯಾ ಸಂಘಕ್ಕೆ ಒಟ್ಟು ₹47.50 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ರಾಜ್ಯದಲ್ಲಿರುವ ಖಾಸಗಿ ಗೋಶಾಲೆಗಳಲ್ಲಿ, ವಯಸ್ಸಾದ, ಅನಾರೋಗ್ಯ ಪೀಡಿತ, ರೈತರು ಬಿಡುವ, ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಕಳುಹಿಸುವ ಜಾನುವಾರುಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ಈ ಗೋಶಾಲೆಗಳಿಗೆ ಜಿಲ್ಲಾ ಪ್ರಾಣಿ ದಯಾ ಸಂಘದಿಂದ ಶಿಫಾರಸ್ಸಿನೊಂದಿಗೆ ಸಲ್ಲಿಕೆಯಾಗುವ ಪ್ರಸ್ತಾವನೆಗಳಿಗೆ, ವಂಟನ ಲಭ್ಯತೆಯ ಆಧಾರದ ಮೇಲೆ ಅನುದಾನ ಬಿಡುಗಡೆ ಮಾಡಲಾಗುತ್ತದೆ. 2021–22ನೇ ಸಾಲಿನಲ್ಲಿ ವಂಟನ ಲಭ್ಯತೆಗೆ ಅನುಗುಣವಾಗಿ ಬಿಡುಗಡೆ ಮಾಡಲಾದ ಅನುದಾನದ ವಿವರ ಕೆಳಕಂಡಂತಿದೆ: 1) ಯಾದಗಿರಿ ಜಿಲ್ಲೆಯ ಅಮೃತ ಧಾರಾ ಗೋಶಾಲೆ, ಕಗ್ಗಲೀಪುರ ಗೋಶಾಲೆಗೆ ₹4,32,080–00 2) ಕಲಬುರ್ಗಿ ಜಿಲ್ಲೆಯ ಖಾಸಗಿ ಗೋಶಾಲೆಗಳು: ಅ) ನಂದಿ ಅನಿಮಲ್ ವೆಲ್ಫೇರ್ ಸೊಸೈಟಿ ಗೋಶಾಲೆಗೆ ₹4,47,200.00 ಆ) ಸ್ವಾಮಿ ಸಮರ್ಥ ಸೇವಾ ಕಲ್ಯಾಣ ಕೇಂದ್ರ ಟ್ರಸ್ಟ್(ರಿ) ಗೋಶಾಲೆಗೆ ₹3,88,826.00 ಇ) ಜೈರಾಮ ಗೋಶಾಲೆ, ಮೈಸೂರು ಪಿಂಜರಾಪೋಲ್, ದಸ್ತಾಪುರ ಗೋಶಾಲೆಗೆ ₹1,94,630.00
ಆ	ಪ್ರತಿ ಗೋ ಶಾಲೆಗೆ ಎಷ್ಟು ಎಕರೆ ಜಮೀನನ್ನು ನಿಗಧಿಪಡಿಲಾಗಿದೆ; (ವಿವರ ನೀಡುವುದು)	
ಇ	ಈ ಮೇಲ್ಕಂಡ ಜಿಲ್ಲೆಗಳಿಗೆ ಗೋ ಹತ್ಯೆ ನಿಯಂತ್ರಣ ಕಾಯ್ದೆ ಜಾರಿಗೆ ಬಂದ ನಂತರ ಗೋ ಶಾಲೆಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು? (ವಿವರ ನೀಡುವುದು)	

ಇ–ಪಸಂಮೀ 87 ಸಲೆವಿ 2022

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು